# ಮೀನಾ ಅಮ್ಮ

## ಭವಿಷ್ಯ ನುಡಿ

ಮೂಲ : **'Swami Vivekananda: The Great Inspirer', ರಾಮಕೃಷ್ಣ ಶಾರದಾ ಮಿಷನ್ ಪ್ರಕಟಣೆ** ಅನುವಾದ : **ಸ್ವರ್ಣಗೌರಿ**

ಮಲಬಾರ್‌ನಲ್ಲಿ ಬಹುಪಾಲು ಜನರು ಹರಿಜನ ಪಂಗಡಕ್ಕೆ ಸೇರಿದವರು. ಆಗಿನ ಕಾಲದಲ್ಲಿ ಹರಿಜನರನ್ನು ಜಾತಿಭ್ರಷ್ಟರೆಂದು ಪರಿಗಣಿಸುತ್ತಿದ್ದರು. ಅವರುಗಳು ರಸ್ತೆಯಲ್ಲಿ ಓಡಾಡುವಂತಿರಲಿಲ್ಲ. ಪಲ್ಲಕ್ಕಿ ಹೊರುವವರು ಶಬ್ದ ಮಾಡಿದ ಕೂಡಲೇ ದೃಷ್ಟಿಗೆ ಗೋಚರವಾಗದಷ್ಟು ದೂರ ಓಡಬೇಕಾಗಿತ್ತು, ಇಲ್ಲವೇ ಕಠಿಣತಮ ಶಿಕ್ಷೆಗೆ ಒಳಗಾಗುತ್ತಿದ್ದರು. ದೇವಸ್ಥಾನಕ್ಕೆ ಪ್ರವೇಶಿಸುವುದಾಗಲಿ, ದೇವಸ್ಥಾನದ ಕೊಳವನ್ನು ಉಪಯೋಗಿಸುವುದಾಗಲಿ ನಿಷಿದ್ಧ. ಸ್ತ್ರಿಯರು ಮತ್ತಷ್ಟು ಶೋಷಣೆಗೆ ಒಳಗಾಗುತ್ತಿದ್ದರು. ಶರೀರದ ಮೇಲ್ಭಾಗವನ್ನು ಬಟ್ಟೆಯಿಂದ ಮುಚ್ಚಿಕೊಳ್ಳುವುದಾಗಲಿ, ಚಿನ್ನಬೆಳ್ಳಿಯ ಆಭರಣಗಳನ್ನು ಧರಿಸುವುದಾಗಲಿ ನಿಷಿದ್ಧವಾಗಿತ್ತು. ವಿದ್ಯಾರ್ಜನೆಯಂತೂ ಬಹುದೂರದ ಮಾತು.



ಸ್ವಾಮಿ ವಿವೇಕಾನಂದರು ಎರ್ನಾಕುಳಂ ಬಿಟ್ಟು ಏಳು ದಿನಗಳ ನಂತರ ಹಡಗಿನಲ್ಲಿ ತಿರುವನಂತಪುರವನ್ನು ತಲುಪಿದರು. ಆಗಿನ ಕಾಲದಲ್ಲಿ ಅದೊಂದೇ ದಾರಿ. ಎರಡನೇ ದಿನ ಆಲೆಪ್ಪಿ ತಲುಪಿದರು. ಹಡಗು ದಡ ತಲುಪಿದರೂ ಸ್ವಾಮೀಜಿಯವರ ಆರೋಗ್ಯ ಚೆನ್ನಾಗಿರದ ಕಾರಣ ಕೋಣೆಯಿಂದ ಹೊರಗೆ ಬರಲಾಗಲಿಲ್ಲ. ಕೂಡಲೇ ಯಜಮಾನ ಮಕ್‌ಬೂಲ್ ಅದೆಲ್ಲಿಂದಲೋ ಒಂದು ಲೋಟ ಬಿಸಿ ಹಾಲು ತಂದಿಟ್ಟ. ರಾತ್ರಿ ಹೆಚ್ಚಿದಂತೆ ಅವರ ಉಸಿರಾಟದ ತೊಂದರೆ ಹೆಚ್ಚಾಯಿತು. ಬೆಳಕು ಹರಿಯುತ್ತಲೇ ಮಕ್‌ಬೂಲ್‌ನು ವೈದ್ಯರನ್ನು ಅರಸುತ್ತಾ ಅಲೆದನು. ಎಲ್ಲಾ ಅಂಗಡಿಗಳು ಮುಚ್ಚಿದ್ದರೂ ಸಹ ಮಕ್‌ಬೂಲ್‌ನು ವೈದ್ಯರಿದ್ದಾರೆಯೇ ಎಂದು ಕೇಳುತ್ತಾ ಹತ್ತಿರದಲ್ಲೇ ಇದ್ದ ಒಂದು ಮನೆಗೆ ಸ್ವಾಮೀಜಿಯವರನ್ನು ಕರೆದೊಯ್ದನು. ಆ ಮನೆಯ ಯಜಮಾನನು ಕುಳಿತುಕೊಳ್ಳಲು ಇವರಿಗೆ ಆಸನವಿತ್ತು ಕಾಯಿಲೆ ಗುಣಪಡಿಸುವುದಾಗಿ ಆಶ್ವಾಸನೆಯಿತ್ತನು. ಆತನ ಎಂಟು ವರ್ಷದ ಮಗಳು ಮೀನಾ ಜೇನುತುಪ್ಪ ಬೆರೆಸಿದ ಬಿಸಿಹಾಲನ್ನು ತಂದಿಟ್ಟು ಸ್ವೀಕರಿಸಬೇಕೆಂದು ಬಿನ್ನವಿಸಿಕೊಂಡಳು. ಅದನ್ನು ಕುಡಿದ ಸ್ವಾಮೀಜಿ ಸ್ವಲ್ಪಹೊತ್ತಿನಲ್ಲೇ ಚೇತರಿಸಿಕೊಂಡರು. ಯಜಮಾನರಿಗೆ ಕೃತಜ್ಞತೆ ಅರ್ಪಿಸುತ್ತಾ ಸ್ವಾಮೀಜಿ, ''ನಿಮ್ಮ ಮಗಳು ಬಹಳ ಬುದ್ಧಿವಂತೆ. ಅಕೆಗೆ ವಿದ್ಯಾಭ್ಯಾಸ ಕೊಡಿಸಿರಿ'' ಎಂದರು.

ಈ ಮಾತನ್ನು ಕೇಳಿದ ಕೂಡಲೇ ಯಜಮಾನರು ಸ್ವಾಮೀಜಿಯವರ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ತನ್ನ ಅಸಹಾಯಕ ಪರಿಸ್ಥಿತಿಯನ್ನು ಹೀಗೆಂದು ತೋಡಿಕೊಂಡನು: ''ನಾವು ಜಾತಿಭ್ರಷ್ಟರು; ರಸ್ತೆಯಲ್ಲಿ ಓಡಾಡುವಂತಿಲ್ಲ, ದೇವಸ್ಥಾನಗಳಿಗೆ ಪ್ರವೇಶವಿಲ್ಲ. ಕಾಯಿಲೆಯಾದಾಗ ವೈದ್ಯರು ನಮ್ಮೆಡೆಗೆ ಔಷಧಿಯನ್ನು ಎಸೆಯುತ್ತಾರೆ. ಯಾರೂ ನಮ್ಮನ್ನು ಸ್ಪರ್ಶಿಸರು. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಮಕ್ಕಳು ಹೇಗೆ ಶಿಕ್ಷಣ ಪಡೆಯಲು ಸಾಧ್ಯ? ದಯವಿಟ್ಟು ನೀವೇ ಅವರನ್ನು ಆಶೀರ್ವದಿಸಿ.''

ಈ ವೃತ್ತಾಂತ ಕೇಳಿದ ಸ್ವಾಮೀಜಿಯವರ ಮುಖ ಕಪ್ಪಿಟ್ಟಿತು. ಆ ಬಾಲಕಿಯ ತಲೆಯ ಮೇಲೆ ಕೈಯಿಟ್ಟು ಹೃತ್ಪೂರ್ವಕ ಆಶೀರ್ವದಿಸಿದರು. ಈ ದಿವ್ಯ ಸಂತನ ಆಶೀರ್ವಾದ ವ್ಯರ್ಥವಾಗುವುದೇ? ಅಯ್ಯನ್‌ಕಾಳಿ (ಸಮಾಜ ಸುಧಾರಕ) ಸಹಾಯದಿಂದ ಮೀನಾ ಕ್ರೈಸ್ತ ಮಿಷನರಿ ಶಾಲೆಯಲ್ಲಿ ಸ್ಥಳ ದೊರೆಯಿತು. ಬಹಳ ಚುರುಕು ಬುದ್ಧಿಯ ಮೀನಾ ವಿದ್ಯಾಭ್ಯಾಸ ಮುಗಿಸಿ ಕೊಚ್ಚಿನ್‌ನ ಒಂದು ಹರಿಜನರ ಶಾಲೆಯಲ್ಲಿ ಅಧ್ಯಾಪಕಿಯಾದಳು. ಅಯ್ಯನ್‌ಕಾಳಿಯ ಸಮಾಜ ಸುಧಾರಣಾ ಕಾರ್ಯಗಳಲ್ಲಿ ತನ್ನನ್ನು ಸಕ್ರಿಯವಾಗಿ ತೊಡಗಿಸಿಕೊಂಡಳು. ಹರಿಜನ ಸ್ತ್ರೀಯರಿಗೆ ಮೈತುಂಬ ಬಟ್ಟೆ ಹಾಕಿಕೊಳ್ಳಲು ಪ್ರೇರೇಪಿಸಿದಳು, ಕೊರಳಿಗೆ ಕಲ್ಲಿನ ಮಾಲೆ ಧರಿಸುವ ಪದ್ಧತಿಯನ್ನು ರದ್ದುಗೊಳಿಸಿದಳು ಮತ್ತು ಸುಪ್ರಸಿದ್ಧ ವೈಕ್ಕಂ ಸತ್ಯಾಗ್ರಹ (ಜಾತಿಯ ಆಧಾರದ ಮೇರೆಗೆ ದೇವಸ್ಥಾನ ಪ್ರವೇಶ ನಿಷೇಧದ ವಿರುದ್ಧ ಚಳುವಳಿ)ದಲ್ಲಿ ಸಕ್ರಿಯವಾಗಿ ಭಾಗವಹಿಸಿದಳು.

ಮುಂದೆ ಮೀನಾ ತನ್ನ ಜೀವನದಲ್ಲಾದ ಮಹತ್ತರ ಬದಲಾವಣೆಗಳನ್ನು ಕುರಿತು ಗದ್ಗದ ಕಂಠದಿಂದ, ''ನನ್ನ ಜೀವನದಲ್ಲಿನ ಎಲ್ಲ ಪ್ರಗತಿಗೂ ಮೂಲಕಾರಣ ಸ್ವಾಮೀಜಿಯವರ ಆಶೀರ್ವಾದ ಹಾಗೂ ಅಯ್ಯನ್‌ಕಾಳಿಯ ಸಹಾಯ'' ಎನ್ನುತ್ತಿದ್ದಳು. ಮೀನಾಳ ವಿದ್ಯಾರ್ಥಿನಿ ದಾಕ್ಷಾಯಿಣಿ ವೇಲುತನ್ ಪ್ರಥಮ ಹರಿಜನ ಪದವೀಧರಳು ಹಾಗೂ ಸುಪ್ರಸಿದ್ಧ ಅಧ್ಯಾಪಕಿಯೂ ಆದಳು!

* * *

''ದೀನರು, ಪದದಳಿತರು, ಪಾಪಿಗಳು, ದುಃಖಿಗಳು, ಕ್ರಿಮಿಕೀಟದವರೆಗೆ ಎಲ್ಲರಿಗೂ ಸೇವೆ ಸಲ್ಲಿಸುವುದಕ್ಕೆ ಯಾರು ಸಿದ್ಧರಾಗಿರುವರೋ ಅವರ ಹೃದಯದಲ್ಲಿ ಗುರುದೇವನು ಆವಿರ್ಭವಿಸುವನು. ಅವರ ನಾಲಿಗೆಯ ಮೂಲಕ ಸಕಲ ಕಲಾಧಿದೇವಿ ಶಾರದೆ ಮಾತನಾಡುವಳು. ಜಗನ್ಮಯಿ ಮಹಾಶಕ್ತಿ ಅವರ ಹೃದಯದಲ್ಲಿ ನೆಲೆಸುವಳು.''

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೪, ಪು. ೨೨೩)*